**ಓ ಎಸ್ ನಂಃ 226/2021**
**ಪಿ ಡಬ್ಲ್ಯು ಃ 1**

**ದಿಃ 06.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎನ್ ವಿ ವಕೀಲರಿಂದಃ-**

ದಿಃ 10.07.1989 ರ ಭೋಗ್ಯ ಪತ್ರವನ್ನು ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಕಡತದಲ್ಲಿ ಇರಬಹುದು ಎಂದು ನುಡಿಯುತ್ತಾರೆ. ಪ್ರತಿವಾದಿಯ ಹೆಸರಿಗೆ ಕ್ರಯದ ಕರಾರು ಪತ್ರ ಬರೆದುಕೊಡುವ ಮೊದಲೇ ಭೋಗ್ಯ ಪತ್ರ ಆಗಿತ್ತು ಎಂದರೆ ಸರಿ. ಭೋಗ್ಯ ಪತ್ರದ ಪ್ರಕಾರ ದಾವಾ ಸ್ವತ್ತಿನ ಸ್ವಾಧೀನವನ್ನು ಪ್ರತಿವಾದಿಗೆ ಹಸ್ತಾಂತರಿಸಲಾಗಿತ್ತು ಎಂದರೆ ಸರಿ. ದಿಃ 23.04.1990 ರಂದು ಕ್ರಯದ ಕರಾರು ಪತ್ರ ಆಗುವುದಕ್ಕಿಂತ ಮುಂಚೆ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರು ಎಂದರೆ ಸರಿ.

**ಪ್ರಶ್ನೆಃ** ನಿಪಿ 1ರ 3 ನೇ ಪುಟದಲ್ಲಿರುವ ಈ ದಿನವೇ ನಿಮ್ಮ ಸ್ವಾಧೀನಕ್ಕೆ ಬಿಟ್ಟು ಕೊಟ್ಟಿರುವ ಒಕ್ಕಣೆ ತಪ್ಪು ?

**ಉತ್ತರಃ** ಸಾಕ್ಷಿಯು ಪ್ರತಿವಾದಿಯು ಸದರಿ ವಿಚಾರನ್ನು ಹೇಳಿ ನಿಪಿ 1ರ ಕ್ರಯದ ಕರಾರು ಪತ್ರದಲ್ಲಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ.

ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ 1ರ ದಾಖಲಾತಿಗೆ ತಾವು ಓದಿ ತಮ್ಮ ಸಹಿಯನ್ನು ಮಾಡಿದ್ದೀರ ಎಂದರೆ ಸಾಕ್ಷಿಯು ಪ್ರತಿವಾದಿಯು ಮಧ್ಯಪಾನ ಮಾಡಿಕೊಂಡು ಬಂದು ತುಂಬಾ ಗಲಾಟೆ ಮಾಡಿರುವ ಕಾರಣ ನಾನು ಓದದೇ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯ ವಿರುದ್ದ ಪೊಲೀಸ್ ದೂರನ್ನು ದಾಖಲು ಮಾಡಿದ್ದೀರ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನನಗೆ ಅಷ್ಟೊಂದು ಧೈರ್ಯ ಇರದ ಕಾರಣ ದೂರನ್ನು ದಾಖಲು ಮಾಡಿರುವುದಿಲ್ಲ.

ನಿಪಿ 5 ರ ದಾಖಲಾತಿಯನ್ನು ತಾವು ನ್ಯಾಯಾಲಯದಲ್ಲಿ ಯಾವ ವಿಚಾರಕ್ಕಾಗಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ನನಗೆ ಅಷ್ಟೊಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ತಾವು ಸಲ್ಲಿಸಿರುವ ಆರ್ ಪಿ ಅರ್ಜಿ ಸಂಖ್ಯೆ 366/16 ವಜಾ ಆಗಿದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ

**ಓ ಎಸ್ ನಂಃ 226/2021**
**ಪಿ ಡಬ್ಲ್ಯೂ ಃ 1**

ಅದು ನಮ್ಮ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ನಿಪಿ 4 ಮತ್ತು 5 ರ ದಾಖಲಾತಿಗಳ ಪ್ರಕಾರ ದಾವಾ ಸ್ವತ್ತಿನ ಸ್ವಾಧೀನವನ್ನು ಪ್ರತಿವಾದಿಯು ತಮಗೆ ಹಸ್ತಾಂತರ ಮಾಡಬೇಕು ಎಂದು ಯಾವುದೇ ಆದೇಶ ಆಗಿಲ್ಲ ಎಂದರೆ ಸರಿ. ನಿಪಿ 4 ಮತ್ತು 5 ರ ದಾಖಲಾತಿಗಳ ಪ್ರಕಾರ ತಾವು ಪ್ರತಿವಾದಿಯ ವಿರುದ್ದ ದಾವೆಯನ್ನು ಸಲ್ಲಿಸಿ ದಾವಾ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಳ್ಳಬಹುದು ಎಂದು ಆದೇಶ ಆಗಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ನಿಪಿ 4 ಮತ್ತು 5 ರ ಆದೇಶಗಳು ವ್ಯಾಜ್ಯ ಕಾರಣ ಅಲ್ಲ ಎಂದರೆ ಸರಿಯಲ್ಲ. ತಾವು ಸಲ್ಲಿಸಿರುವ ದಾವೆಯು ಕಾಲ ಪರಿಮಿತಿ ಇಲ್ಲ ಆದ್ದರಿಂದ ತಾವು ಈ ದಾವೆಯಲ್ಲಿ ಯಾವುದೇ ಪರಿಹಾರವನ್ನು ಪಡೆದುಕೊಳ್ಳಲು ಅರ್ಹರಲ್ಲ ಎಂದರೆ ಸರಿಯಲ್ಲ. ತಾವು ದಾವಾ ಸ್ವತ್ತಿಗೆ ಮಾಲೀಕರು ಅಲ್ಲ ಆದ ಕಾರಣ ಈ ದಾವೆಯನ್ನು ಸಲ್ಲಿಸಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅಭಿವೃದ್ದಿಗಾಗಿ ಪ್ರತಿವಾದಿಯು ಸುಮಾರು ರೂ. 25,00,000/- ಹಣವನ್ನು ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ತಮಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದ ಕಾರಣ ತಾವು ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**